ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸ್ವತ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 15/12/2019

# ಶಾಸಕರ ಬಡಿದಾಟ ಚಾರ್ಜ್‌ಶೀಟ್ ಸಲ್ಲಿಕೆ

15-12-19

**ವಿಕ ಸುದ್ದಿಲೋಕ** ರಾಮನಗರ





ಬಿಡದಿಯ ಈಗಲ್‌ಟನ್ ರೆಸಾರ್ಟ್‌ನಲ್ಲಿ ಶಾಸಕರಾದ ಜೆ.ಎನ್. ಗಣೇಶ್ ಹಾಗೂ ಆನಂದ ಸಿಂಗ್ ನಡುವಿನ ಗಲಾಟೆ ಪ್ರಕರಣ ಸಂಬಂಧ ಬಿಡದಿ ಪೊಲೀಸರು ಡಿ.9ರಂದು ಬೆಂಗಳೂರಿನ ಜನಪ್ರತಿನಿಧಿ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ.

ಸುಮಾರು 25ರಿಂದ 30 ಪುಟಗಳ ಚಾರ್ಜ್‌ಶೀಟ್‌ನಲ್ಲಿ, ಕೆಲವು ಶಾಸಕರೂ ಸೇರಿದಂತೆ 12 ಸಾಕ್ಷಿಗಳನ್ನು ಪೊಲೀಸರು ಉಲ್ಲೇಖಿಸಿ ದ್ದಾರೆ ಎಂಬ ಮಾಹಿತಿ ವಿಕಗೆ ಲಭ್ಯವಾಗಿದೆ. ಗಲಾಟೆ ಸಂದರ್ಭ ಅಲ್ಲಿದ್ದ ಜನಪ್ರತಿನಿಧಿಗಳು ಹಾಗೂ ಹೋಟೆಲ್ ಸಿಬ್ಬಂದಿಯ ಹೇಳಿಕೆಗಳು ಹಾಗೂ ಹೋಟೆಲ್‌ನ ಸಿಸಿಟಿವಿ ದೃಶ್ಯಾವಳಿಗಳನ್ನು ಸಾಕ್ಷ್ಯವಾಗಿ ನೀಡಿದ್ದು, ಮುಂದಿನ ಎಲ್ಲ ವಿಚಾರಣೆಯು ಬೆಂಗಳೂರಿನಲ್ಲೇ ನಡೆಯಲಿದೆ.

**ಏನಿದು ಘಟನೆ?:** ಜನವರಿ 18ರಿಂದ ಕಾಂಗ್ರೆಸ್‌ನ ಶಾಸಕರು ಈಗಲ್‌ಟನ್ ರೆಸಾರ್ಟ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಜ.20ರಂದು ರೆಸಾರ್ಟ್‌ನಲ್ಲಿ ಶಾಸಕರಾದ ಕಂಪ್ಲಿ ಗಣೇಶ್ ಹಾಗೂ ಆನಂದ ಸಿಂಗ್ ನಡುವೆ ಕುಡಿದ ಅಮಲಿನಲ್ಲಿ ಗಲಾಟೆ ನಡೆದಿತ್ತು. ತೀವ್ರ ಸ್ವರೂಪದ ಹಲ್ಲೆಗೆ ಒಳಗಾದ ಆನಂದ ಸಿಂಗ್ ಆಸ್ಪತ್ರೆಗೆ ಸೇರಿದ್ದರೆ, ಪ್ರಕರಣ ಬೆನ್ನಲ್ಲೇ ಶಾಸಕ ಗಣೇಶ್ ನಾಪತ್ತೆಯಾಗಿದ್ದರು. ಜ.21ರಂದು ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದಾದ ಬಳಿಕ ಬರೊಬ್ಬರಿ ಒಂದು ತಿಂಗಳ ಕಾಲ ತಲೆ ಮರೆಸಿಕೊಂಡಿದ್ದ ಗಣೇಶ್ ಅವರನ್ನು ಫೆ.20ರಂದು ಪೊಲೀಸರು ಗುಜರಾತ್‌ನಲ್ಲಿ ಬಂಧಿಸಿ ಕರೆತಂದಿದ್ದರು.